# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ತಡವಾಗಿ ಪಾವತಿಯಾದ ಪಿಂಚಣಿ, ಉಪದಾನ, ಪರಿವರ್ತಿತ ಪಿಂಚಣಿ ಹಾಗೂ ರಜೆ ನಗದೀಕರಣ ಇವುಗಳ ಮೇಲೆ ಬಡ್ಡಿಯನ್ನು ನೀಡುವ ಬಗ್ಗೆ.

**ಓದಲಾಗಿದೆ :**

(1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 864 ಪಿಇಎನ್ 84, ದಿನಾಂಕ 14-8-85.

(2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಸ್ಪೆಷಲ್) 260 ಪಿಇಎನ್ 86, ದಿನಾಂಕ 4-6-86.

**ಪ್ರಸ್ತಾವನೆ :**

ನಿವೃತ್ತಿ ಹೊಂದಿದ ದಿನಾಂಕದಿಂದ, ಏಳನೇ ತಿಂಗಳಿನ ಮೊದಲ ದಿನಾಂಕದಿಂದ ಪ್ರಾರಂಭಗೊಂಡು, ಪಾವತಿ ಮಾಡುವ ತಿಂಗಳಿನ ಹಿಂದಿನ ತಿಂಗಳ ಕೊನೆಯವರೆಗೆ ಈ ಕೆಳಗಿನ ದರಗಳಲ್ಲಿ ತಡವಾಗಿ ಪಾವತಿಯಾದ ಉಪದಾನದ ಮೇಲೆ ಬಡ್ಡಿಯನ್ನು ಕೆಲವು ನಿಬಂಧನೆಗಳೊಂದಿಗೆ ಕೊಡುವುದಕ್ಕೆ ಮೇಲ್ಕಂಡ ಸರ್ಕಾರಿ ಆದೇಶಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

(1) ಆರು ತಿಂಗಳಿಂದ ಒಂದು ವರ್ಷ ವಿಳಂಬವಾದುದಕ್ಕೆ ಶೇಕಡ 7

(2) ಒಂದು ವರ್ಷಕ್ಕೆ ಮೇಲ್ಪಟ್ಟು ವಿಳಂಬವಾದುದಕ್ಕೆ ಶೇಕಡ 10

ಆದಾಗ್ಯೂ, ಕರ್ನಾಟಕ ಸರ್ಕಾರವು ದಾಖಲು ಮಾಡಿದ ಪುನರ್‌ಪರಿಶೀಲನಾ ಅರ್ಜಿ ಸಂಖ್ಯೆ: 142/1992ರ ಮೇಲೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ತನ್ನ ದಿನಾಂಕ 23-11-1992ರ ಆದೇಶದಲ್ಲಿ ಹಾಗೂ ಇತರೆ ಬಹಳಷ್ಟು ಪ್ರಕರಣಗಳಲ್ಲಿ ತಡವಾಗಿ ಪಾವತಿಯಾದ ಉಪದಾನದ ಮೇಲೆ ಮಾತ್ರವಲ್ಲದೆ, ತಡವಾಗಿ ಪಾವತಿಯಾದ ನಿವೃತ್ತಿ ವೇತನ, ಪರಿವರ್ತಿತ ಪಿಂಚಣಿ ಹಾಗೂ ರಜಾ ನಗದೀಕರಣ ಇವುಗಳ ಮೇಲೆ ಸಹ ಶೇಕಡಾ 12ರಷ್ಟು ಬಡ್ಡಿಯನ್ನು ಕೊಡಬೇಕೆಂದು ಆದೇಶಿಸಿದೆ. ನಿವೃತ್ತಿ ವೇತನದ ಕಾಗದ ಪತ್ರಗಳನ್ನು ಸಿದ್ಧಪಡಿಸಲು ನಿವೃತ್ತಿ ಹೊಂದಿದ ದಿನಾಂಕದಿಂದ ಕನಿಷ್ಠ ಆರು ತಿಂಗಳು ಸಮಯಾವಕಾಶ ಬೇಕೆಂಬ ಸರ್ಕಾರದ ವಾದವನ್ನು ವಿರೋಧಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯು, ಅರ್ಜಿ ಸಂಖ್ಯೆ: 4833/90ರಲ್ಲಿ ಶೇಕಡಾ 12ರ ದರದಲ್ಲಿ ಬಡ್ಡಿಯನ್ನು ನಿವೃತ್ತಿ ಹೊಂದಿದ ನಾಲ್ಕನೇ ತಿಂಗಳ ಪ್ರಾರಂಭದಿಂದ ನೀಡಬೇಕೆಂದು ಆದೇಶಿಸಿದೆ. ಭಾರತ ಸರ್ಕಾರದ ನಿಯಮಾವಳಿಗಳಲ್ಲೂ ಈ ಉದ್ದೇಶಕ್ಕಾಗಿ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ. ಮೇಲ್ಕಂಡ ವಸ್ತುಸ್ಥಿತಿಯಲ್ಲಿ ಸರ್ಕಾರವು ನಿವೃತ್ತಿ ಹೊಂದಿದ ನಾಲ್ಕನೆಯ ತಿಂಗಳ ಪ್ರಾರಂಭದಿಂದ ಬಡ್ಡಿಯನ್ನು ನೀಡುವುದು ಸೂಕ್ತ ಹಾಗೂ ಸಮಂಜಸವೆಂದು ಪರಿಗಣಿಸಿದೆ.

ಅರ್ಜಿ ಸಂಖ್ಯೆ: 1833/93 ಶ್ರೀ ಬಿ. ಜಿ. ಭಾಸ್ಕರ್–ವಿರುದ್ಧ–ರಾಜ್ಯ ಸರ್ಕಾರ ಈ ಪ್ರಕರಣದಲ್ಲಿ, ಪರಿವರ್ತಿತ ಪಿಂಚಣಿಯು ಸಂಪೂರ್ಣ ಪಿಂಚಣಿಯನ್ನು ಪಡೆಯುವುದು ಕೊನೆಗೊಂಡ ದಿನಾಂಕದಿಂದಲೇ ಲಭ್ಯವಾಗುವುದರಿಂದ ಆ ದಿನಾಂಕದಿಂದ ಮಾತ್ರ ತಡವಾಗಿ ಪಾವತಿಸುವ ಪರಿವರ್ತಿತ ಪಿಂಚಣಿಗೆ ಬಡ್ಡಿಯನ್ನು ನೀಡಬೇಕಾಗುತ್ತದೆ ಎಂದು ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಆದೇಶಿಸಿದೆ. ಪರಿವರ್ತಿತ ಪಿಂಚಣಿ ಪಡೆಯುವ ದಿನಾಂಕದವರೆಗೆ ಸಂಪೂರ್ಣ ನಿವೃತ್ತಿ ವೇತನವನ್ನು ಪಡೆಯುತ್ತಿರುವುದರಿಂದ ಪಿಂಚಣಿದಾರನಿಗೆ ಯಾವುದೇ ಆರ್ಥಿಕ ನಷ್ಟವು ಉಂಟಾಗುವುದಿಲ್ಲ. ಪಿಂಚಣಿದಾರರ ಲೆಕ್ಕಕ್ಕೆ ಪರಿವರ್ತಿತ ಪಿಂಚಣಿಯ ಮೊತ್ತವು ಜಮಾ ಆದ ದಿನಾಂಕದಿಂದ ಮಾತ್ರ, ಪೂರ್ಣ ಪಿಂಚಣಿಯು ಕಡಿಮೆಯಾಗುತ್ತದೆ. ಪೂರ್ಣ ಪಿಂಚಣಿಯು ಕಡಿತಗೊಂಡ ದಿನಾಂಕ ಮತ್ತು ಪರಿವರ್ತಿತ ಪಿಂಚಣಿಯನ್ನು ಪಾವತಿಸಿದ ದಿನಾಂಕದ ನಡುವೆ ಯಾವುದೇ ಸಮಯದ ಅಂತರವಿಲ್ಲದಿರುವುದರಿಂದ, ಪಿಂಚಣಿದಾರರಿಗೆ ತಡವಾಗಿ ಪಾವತಿಸಿದ ಪರಿವರ್ತಿತ ಪಿಂಚಣಿಯ ಮೇಲೆ ಯಾವುದೇ ಆರ್ಥಿಕ ನಷ್ಟವನ್ನು ಸರಿದೂಗಿಸುವ ಸಲುವಾಗಿ ಬಡ್ಡಿಯನ್ನು ನೀಡುವ ಪ್ರಮೇಯ ಉದ್ಭವಿಸುವುದಿಲ್ಲ.

ಆದೇಶ ಸಂಖ್ಯೆ : ಆಇ (ವಿಶೇಷ) 199 ಪಿಇಎನ್ 93. ಬೆಂಗಳೂರು, ದಿನಾಂಕ : 13ನೇ ಸೆಪ್ಟೆಂಬರ್ 1994

ಪ್ರಸಕ್ತ ವಿಷಯದ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಮತ್ತು ಉಲ್ಲೇಖ (1) ಮತ್ತು (2) ರಲ್ಲಿ ನಮೂದಿಸಿರುವ ದಿನಾಂಕ 14-8-1985 ಮತ್ತು 4-6-1986 ರ ಸರ್ಕಾರಿ ಆದೇಶಗಳನ್ನು ರದ್ದುಗೊಳಿಸಿ, ಈ ಕೆಳಕಂಡ ನಿವೃತ್ತಿ/ ಮರಣೋತ್ತರ ಸೌಲಭ್ಯಗಳ ಸಂಬಂಧದಲ್ಲಿ, ನಿವೃತ್ತಿ ಹೊಂದಿದ ಸರ್ಕಾರಿ ನೌಕರನಿಗೆ ಅಥವಾ ಸರ್ಕಾರಿ ನೌಕರನು ಸೇವಾವಧಿಯಲ್ಲಿ ಅಥವಾ ನಿವೃತ್ತಿಯ ನಂತರ ಮರಣ ಹೊಂದಿದಲ್ಲಿ ಆ ನೌಕರನ ಕುಟುಂಬಕ್ಕೆ, ಶೇಕಡಾ 12ರ ದರದಲ್ಲಿ ಬಡ್ಡಿಯನ್ನು ಪಾವತಿ ಮಾಡಲು ಸರ್ಕಾರವು ಆದೇಶಿಸುತ್ತದೆ :—

| ಅ | ಆ | ಇ | ಈ |
|---|---|---|---|
| ಸರ್ಕಾರಿ ನೌಕರನು ನಿವೃತ್ತಿ ಹೊಂದಿದ ಸಂದರ್ಭದಲ್ಲಿ | ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಮೃತನಾದ ಸಂದರ್ಭದಲ್ಲಿ | ಸರ್ಕಾರಿ ನೌಕರನು ನಿವೃತ್ತನಾಗಿ ನಿವೃತ್ತಿ ಸೌಲಭ್ಯ ಪಡೆಯುವ ಮೊದಲು ಮರಣ ಹೊಂದಿದಾಗ | ಸರ್ಕಾರಿ ನೌಕರನು ನಿವೃತ್ತಿ ಹೊಂದಿ ನಿವೃತ್ತಿ ವೇತನ/ ಉಪದಾನ ಪಡೆದ ನಂತರ ಮರಣ ಹೊಂದಿದಾಗ |
| 1) ಸೇವಾ ಉಪದಾನ ಅಥವಾ ಪಿಂಚಣಿ<br>2) ಟರ್ಮಿನಲ್ ಉಪದಾನ ಅಥವಾ ನಿವೃತ್ತಿ ಉಪದಾನ<br>3) ಗಳಿಕೆ ರಜಾ ನಗದೀಕರಣ | 1) ಕುಟುಂಬ ನಿವೃತ್ತಿ ವೇತನ.<br>2) ಕ.ಸ.ಸೇ.ನಿ. ನಿಯಮ 292 (ii) ರಲ್ಲಿರುವಂತೆ ಟರ್ಮಿನಲ್ ಅಥವಾ ಮರಣ ಉಪ ಉಪದಾನ<br>3) ಗಳಿಕೆ ರಜಾ ನಗದೀಕರಣ | 1) ಸೇವಾ ಉಪದಾನ ಅಥವಾ ಬಾಕಿ ಇರುವ ಪಿಂಚಣಿ.<br>2) ಟರ್ಮಿನಲ್ ಅಥವಾ ನಿವೃತ್ತಿ ಉಪದಾನ,<br>3) ಗಳಿಕೆ ರಜಾ ನಗದೀಕರಣ.<br>4) ಕುಟುಂಬ ನಿವೃತ್ತಿ ವೇತನ. | ಕುಟುಂಬ ನಿವೃತ್ತಿ ವೇತನ |

(2) ಮೇಲೆ ಹೇಳಿರುವ ಸೌಲಭ್ಯಗಳನ್ನು ನಿಗದಿತ ವೇಳೆಯೊಳಗೆ ಆಯಾ ಸಂದರ್ಭಗಳಲ್ಲಿ ಹೇಗೆ ಇತ್ಯರ್ಥಗೊಳಿಸಬೇಕು ಮತ್ತು ಯಾವುದೇ ಸೌಲಭ್ಯವನ್ನು ತಡವಾಗಿ ಪಾವತಿಸಿದ ಸಂದರ್ಭದಲ್ಲಿ ಬಡ್ಡಿಯನ್ನು ಹೇಗೆ ಲೆಕ್ಕ ಹಾಕಬೇಕು ಎಂಬುದನ್ನು ಈ ಕೆಳಗೆ ಸ್ಪಷ್ಟಪಡಿಸಲಾಗಿದೆ ;

(ಎ) ಸರ್ಕಾರಿ ನೌಕರನು ನಿವೃತ್ತಿ ಹೊಂದಿದ ತಿಂಗಳಿನ ಕೊನೆಯ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ನಿವೃತ್ತ ಸರ್ಕಾರಿ ನೌಕರನಿಗೆ ಬರಬೇಕಾದ ಸೌಲಭ್ಯಗಳನ್ನು ನಿವೃತ್ತ ದಾಖಲೆಗಳ ಪರಿಶೀಲನೆಯ ನಂತರ ಇತ್ಯರ್ಥಗೊಳಿಸತಕ್ಕದ್ದು. ನಿವೃತ್ತಿ ಸೌಲಭ್ಯಗಳು ಈ ಅವಧಿಯಲ್ಲಿ ಇತ್ಯರ್ಥಗೊಂಡಿರದಿದ್ದಲ್ಲಿ ಮತ್ತು ಸರ್ಕಾರಿ ನೌಕರನು ವಿಳಂಬಕ್ಕಾಗಿ ಬಾಧ್ಯನಲ್ಲದಿದ್ದ ಪಕ್ಷದಲ್ಲಿ ಮೇಲೆ ಹೇಳಿದ ಅವಧಿಯು ಮುಗಿದ ದಿನದಿಂದ ಪಾವತಿಯನ್ನು ಇತ್ಯರ್ಥಗೊಳಿಸಿದ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಶೇಕಡಾ 12ರ ದರದಲ್ಲಿ ಬಡ್ಡಿಯನ್ನು ಪಾವತಿಸಬೇಕು.

(ಬಿ) ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯ ನಿಯಮ 214 ರನ್ವಯ ಹೂಡಲಾಗಿದೆ ಎಂದು ಭಾವಿಸಲಾದ ಇಲಾಖಾ ವಿಚಾರಣೆ ಅಥವಾ ನ್ಯಾಯಾಂಗ ವಿಚಾರಣೆಯ ಅಂತ್ಯದಲ್ಲಿ ನಿವೃತ್ತ ನೌಕರನು ಸಂಪೂರ್ಣ ದೋಷ ಮುಕ್ತನೆಂದಾದಲ್ಲಿ ಬಡ್ಡಿಯನ್ನು ಆ ಸರ್ಕಾರಿ ನೌಕರನು ನಿವೃತ್ತನಾದ ತಿಂಗಳ ಕೊನೆಯ ದಿನಾಂಕದ ನಾಲ್ಕು ತಿಂಗಳ ಪ್ರಾರಂಭದಿಂದ ಪಾವತಿಯನ್ನು ಇತ್ಯರ್ಥಗೊಳಿಸಿದ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಪಾವತಿಸಬೇಕು.

(ಸಿ) ನಿವೃತ್ತ ನೌಕರನ ಮೇಲೆ ವಿಚಾರಣಾ ನಡವಳಿಗಳು ಬಾಕಿ ಇದ್ದು ಅಥವಾ ಆರಂಭಿಸಲ್ಪಟ್ಟಿದ್ದು, ವಿಚಾರಣೆಯ ಅಂತ್ಯದಲ್ಲಿ ಅಂಥ ಸರಕಾರಿ ನೌಕರನು ಸಂಪೂರ್ಣವಾಗಿ ದೋಷಮುಕ್ತನಾಗದಿದ್ದ ಪಕ್ಷದಲ್ಲಿ ವಿಚಾರಣಾ ಮುಕ್ತಾಯದ ತತ್ಪರಿಣಾಮದ ಆದೇಶವನ್ನು ಹೊರಡಿಸಿದ ಮೂರು ತಿಂಗಳ ಒಳಗೆ ನಿವೃತ್ತಿ ಸೌಲಭ್ಯಗಳನ್ನು ಇತ್ಯರ್ಥಪಡಿಸತಕ್ಕದ್ದು. ಹಾಗೆ ಇತ್ಯರ್ಥ ಮಾಡದೆ ತಡವಾದಲ್ಲಿ ಸದರಿ ಆದೇಶ ಹೊರಡಿಸಿದ ನಾಲ್ಕನೆಯ ತಿಂಗಳ ಪ್ರಾರಂಭದಿಂದ, ಪಾವತಿಯನ್ನು ಇತ್ಯರ್ಥಗೊಳಿಸಿದ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಬಡ್ಡಿಯನ್ನು ಪಾವತಿಸಬೇಕು.

3. ಒಂದು ವೇಳೆ ಸರ್ಕಾರಿ ನೌಕರನು ಸೇವೆಯಲ್ಲಿದ್ದಾಗ ಮೃತಪಟ್ಟಲ್ಲಿ ಅವನ ಕುಟುಂಬಕ್ಕೆ ಸಲ್ಲಬೇಕಾದ ಮರಣೋತ್ತರ ಸೌಲಭ್ಯಗಳನ್ನು ಮರಣ ಹೊಂದಿದ ತಿಂಗಳಿನ ಮುಂದಿನ ತಿಂಗಳ ಮೊದಲ ದಿನದಿಂದ ಮೂರು ತಿಂಗಳೊಳಗಾಗಿ ಇತ್ಯರ್ಥಪಡಿಸತಕ್ಕದ್ದು. ಹಾಗೆ ಇತ್ಯರ್ಥಪಡಿಸದಿದ್ದಲ್ಲಿ, ಈ ಕಾಲಾವಧಿಯು ಮುಗಿದ ದಿನಾಂಕದಿಂದ ಪಾವತಿಯನ್ನು ಇತ್ಯರ್ಥಗೊಳಿಸಿದ ತಿಂಗಳ ಹಿಂದಿನ ತಿಂಗಳ ಕೊನೆಯ ದಿನಾಂಕದವರೆಗೆ ಬಡ್ಡಿಯನ್ನು ನೀಡಬೇಕು. ನಿವೃತ್ತಿ ಸೌಲಭ್ಯ ಅಥವಾ ಕುಟುಂಬ ನಿವೃತ್ತಿ ವೇತನ ಯಾರಿಗೆ ಸಲ್ಲಬೇಕು ಎಂಬ ಹಕ್ಕಿನ ಬಗ್ಗೆ ವಿವಾದವೇನಾದರೂ ಇದ್ದು, ಅಂಥ ವಿವಾದ/ವ್ಯಾಜ್ಯ ಇತ್ಯರ್ಥವಾಗುವವರೆಗೆ ಈ ಸೌಲಭ್ಯಗಳನ್ನು ತಡೆಹಿಡಿದಿರುವುದರಿಂದ ಆಗುವ ವಿಳಂಬಕ್ಕೆ ಯಾವುದೇ ಬಡ್ಡಿಯನ್ನು ನೀಡತಕ್ಕದ್ದಲ್ಲ.

4. ನಿವೃತ್ತಿ ಸೌಲಭ್ಯವನ್ನು ಪಡೆಯುವುದಕ್ಕೆ ಮುಂಚಿತವಾಗಿ ನಿವೃತ್ತ ಸರ್ಕಾರಿ ನೌಕರನು, ಮೃತ ಹೊಂದಿದ ಸಂದರ್ಭದಲ್ಲಿ, ತಡವಾಗಿ ಪಾವತಿಯಾದ ನಿವೃತ್ತಿ ಸೌಲಭ್ಯಗಳ ಮೇಲೆ ಮರಣ ಹೊಂದಿದ ದಿನಾಂಕದ ಹಿಂದಿನ ತಿಂಗಳ ಕೊನೆಯವರೆಗೆ ಬಡ್ಡಿಯನ್ನು ಮೇಲ್ಕಂಡ ಕಂಡಿಕೆ 2ರ ಉಪಕಂಡಿಕೆ (ಎ), (ಬಿ) ಮತ್ತು (ಸಿ) ರನ್ವಯ ಕ್ರಮಬದ್ಧಗೊಳಿಸಬೇಕು. ಇಂತಹ ನಿವೃತ್ತಿ ಸೌಲಭ್ಯಗಳು ಮತ್ತು ಕುಟುಂಬದ ನಿವೃತ್ತಿ ವೇತನವನ್ನು ಸರ್ಕಾರಿ ನೌಕರನು ಮರಣ ಹೊಂದಿದ ತಿಂಗಳಿನ ಮುಂದಿನ ತಿಂಗಳ ಪ್ರಾರಂಭದಿಂದ ಮೂರು ತಿಂಗಳೊಳಗಾಗಿ, ಅದನ್ನು ಪಡೆಯಲು ಅರ್ಹರಾದವರಿಗೆ ಪಾವತಿಸದೆ ಇದ್ದಲ್ಲಿ, ಅದಕ್ಕೆ ಬಡ್ಡಿಯನ್ನು, ಮೇಲ್ಕಂಡ ಕಂಡಿಕೆ (3) ರಂತೆ ಕ್ರಮಬದ್ಧಗೊಳಿಸಬೇಕು. ನಿವೃತ್ತಿ ಸೌಲಭ್ಯ ಅಥವಾ ಕುಟುಂಬ ನಿವೃತ್ತಿ ವೇತನ ಯಾರಿಗೆ ಸಲ್ಲಬೇಕು ಎಂಬ ಹಕ್ಕಿನ ಬಗ್ಗೆ ವಿವಾದವೇನಾದರೂ ಇದ್ದು, ಅಂಥ ವಿವಾದ/ವ್ಯಾಜ್ಯ ಇತ್ಯರ್ಥವಾಗುವವರೆಗೆ ಈ ಸೌಲಭ್ಯಗಳನ್ನು ತಡೆಹಿಡಿದಿರುವುದರಿಂದ ಆಗುವ ವಿಳಂಬಕ್ಕೆ ಯಾವುದೇ ಬಡ್ಡಿಯನ್ನು ನೀಡತಕ್ಕದ್ದಲ್ಲ.

5. ನಿವೃತ್ತಿ ಸೌಲಭ್ಯವನ್ನು ಪಡೆದುಕೊಂಡ ನಂತರ ಸರ್ಕಾರಿ ನೌಕರನು ಮರಣ ಹೊಂದಿದ ಸಂದರ್ಭದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ತಡವಾಗಿ ಪಾವತಿಸಿರುವುದಕ್ಕೆ ಬಡ್ಡಿಯನ್ನು ಮೇಲ್ಕಾಣಿಸಿದ ಕಂಡಿಕೆ (3) ರಂತೆ ಕ್ರಮಬದ್ಧಗೊಳಿಸಬೇಕು.

6. ಮಹಾಲೇಖಪಾಲರಿಗೆ ಇಲಾಖಾ ಅಧಿಕಾರಿಯಿಂದ ನಿವೃತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ತಡವಾಗಿ ಸಲ್ಲಿಸಿದ ಸಂದರ್ಭಗಳಲ್ಲಿ, ಇಲಾಖಾ ಮುಖ್ಯಸ್ಥರು ಕೂಲಂಕಷವಾಗಿ ಪರಿಶೀಲಿಸಿದ ನಂತರ ತಡವಾದುದಕ್ಕೆ ಕಾರಣವನ್ನು ದಾಖಲಿಸಿ ಹಾಗೂ ಇದಕ್ಕೆ ಜವಾಬ್ದಾರರಾದ ಅಧಿಕಾರಿ ಹಾಗೂ ನೌಕರನ ಮೇಲೆ ತೆಗೆದುಕೊಂಡ ಕ್ರಮ ಹಾಗೂ ಪಾವತಿಸಬೇಕಾದ ಬಡ್ಡಿ ಇವುಗಳ ಬಗ್ಗೆ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

7. ಪಾವತಿ ಮಾಡಿದ ಬಡ್ಡಿ ಹಣವನ್ನು, ಪಿಂಚಣಿಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿ ಅಥವಾ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳನ್ನು ತಡವಾಗಿ ಇತ್ಯರ್ಥ ಮಾಡಲು ಕಾರಣರಾದ ವ್ಯಕ್ತಿಯಿಂದ ವಸೂಲು ಮಾಡತಕ್ಕದು.

8. ಈ ಸಂಬಂಧದ ವೆಚ್ಚವನ್ನು ಲೆಕ್ಕ ಶೀರ್ಷಿಕೆ '' 2049-ಬಡ್ಡಿ ಪಾವತಿ-60-ಇತರೆ-ಅನಿವಾರ್ಯತೆ ಮೇಲಿನ ಬಡ್ಡಿ-701-ಇತರೆ-3-01-ತಡವಾಗಿ ಪಾವತಿಸಿದ ಪಿಂಚಣಿ/ನಿವೃತ್ತಿ/ಮರಣೋತ್ತರ ಸೌಲಭ್ಯಗಳು (ಹೊಸ ಶೀರ್ಷಿಕೆ) ''ಗೆ ಖರ್ಚು ಹಾಕತಕ್ಕದ್ದು.

9. ಖಜಾನೆ ನಿರ್ದೇಶಕರು ನಿವೃತ್ತರಾದ ನೌಕರರಿಗೆ ಖಜಾನೆಗಳ ಮೂಲಕ ಬಡ್ಡಿ ಪಾವತಿ ಮಾಡಲು ಕ್ರಮ ತೆಗೆದು ಕೊಳ್ಳಬೇಕು, ಪಾವತಿ ಮಾಡುವ ಖಜಾನೆಯು ಉಪದಾನ ಪಾವತಿಗೆ ಸಂಬಂಧಿಸಿದಂತೆ ಒಂದು ದಾಖಲೆಯನ್ನಿಡಬೇಕು.

10. ಖಜಾನೆ ನಿರ್ದೇಶಕರನ್ನು ಈ ಲೆಕ್ಕ ಶೀರ್ಷಿಕೆಗೆ ಸಂಬಂಧಿಸಿದಂತೆ ಮುಖ್ಯ ನಿಯಂತ್ರಣ ಅಧಿಕಾರಿಯೆಂದು ನೇಮಿಸಲಾಗಿದೆ. ಅವರು ಈ ಕುರಿತು ಆಯವ್ಯಯದಲ್ಲಿ ಸಾಕಷ್ಟು ಅವಕಾಶ ಮಾಡಲು ಮತ್ತು ಖಜಾನೆಗಳ ಲೆಕ್ಕಗಳನ್ನು ಮಹಾಲೇಖಪಾಲರ ಕಛೇರಿಯ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಲು ಜವಾಬ್ದಾರರಾಗಿರುತ್ತಾರೆ.

11. ಈ ಆದೇಶದನ್ವಯ ವಿಳಂಬವಾಗಿ ನೀಡಿದ ನಿವೃತ್ತಿ ವೇತನ ಸೌಲಭ್ಯಗಳ ಮೇಲೆ ಪಾವತಿಸಬೇಕಾದ ಬಡ್ಡಿಯ ಎಲ್ಲ ಪ್ರಕರಣಗಳನ್ನು ಸಂಬಂಧಿಸಿದ ಇಲಾಖಾ ಕಾರ್ಯದರ್ಶಿಗಳು, ವಿಶೇಷಾಧಿಕಾರಿ (ವಿಶ್ರಾಂತಿ ವೇತನ) ಇವರ ಸಹಮತಿ ಯೊಂದಿಗೆ ಮಾಡತಕ್ಕದ್ದು ಹಾಗೂ ಮಂಜೂರಾತಿ ಆದೇಶಗಳ ಪ್ರತಿಗಳನ್ನು : ಖಜಾನೆ ನಿರ್ದೇಶಕರು / ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಹಾಗೂ ವಿಶೇಷಾಧಿಕಾರಿ (ವಿಶ್ರಾಂತಿ ವೇತನ) ಇವರಿಗೆ ಕಳುಹಿಸಬೇಕು. ವಿಶೇಷಾಧಿಕಾರಿ (ವಿಶ್ರಾಂತಿ ವೇತನ) ಅವರು ಅಂತಹ ಪಾವತಿಗಳನ್ನು ಪರೀಕ್ಷಿಸಲು ಒಂದು ವಾಚ್ ರಿಜಿಸ್ಟರ್ (Watch Register)ನ್ನು ಇಡಬೇಕು. ಅದರಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಿಗೆ ಬಡ್ಡಿಯನ್ನು ಪಾವತಿಸಿದೆ, ಬಡ್ಡಿ ರೂಪದಲ್ಲಿ ನೀಡಿರುವ ಒಟ್ಟು ಮೊತ್ತ, ಮಂಜೂರಾದ ಆದೇಶದ ಸಂಖ್ಯೆ ಮತ್ತು ದಿನಾಂಕ ಹಾಗೂ ಸಂಬಂಧಪಟ್ಟ ಅಧಿಕಾರಿ / ನೌಕರರ ಮೇಲೆ ಆದೇಶಿಸಿರುವ ಬಡ್ಡಿಯ ವಸೂಲಾತಿ ಬಗ್ಗೆ ವಿವರಗಳನ್ನು ನಮೂದಿಸಬೇಕು.

12. ಈ ಆದೇಶಗಳು ತಕ್ಷಣದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಮೀಮ್ ಬಾನು

ಸರ್ಕಾರದ ಕಾರ್ಯದರ್ಶಿ–2,
ಆರ್ಥಿಕ ಇಲಾಖೆ.

ಇವರಿಗೆ :—

1. ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು, ಗೆಜೆಟ್‌ನ ಮುಂದಿನ ವಾರದ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
2. ಮಹಾಲೇಖಪಾಲರು, (ಲೆಕ್ಕ/ಆಡಿಟ್) ಕರ್ನಾಟಕ ರಾಜ್ಯ, ಬೆಂಗಳೂರು
3. ಎಲ್ಲಾ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು.
4. ಎಲ್ಲಾ ಇಲಾಖಾ ವಿಶೇಷ–ಅಪರ–ಜಂಟಿ ಕಾರ್ಯದರ್ಶಿಗಳು
5. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು.
6. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು
7. ರಾಜ್ಯದ ಎಲ್ಲಾ ವಿಭಾಗಾಧಿಕಾರಿಗಳು.
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
9. ನಿಯಂತ್ರಣಾಧಿಕಾರಿ, ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು.
10. ಎಲ್ಲಾ ಇಲಾಖಾ ಉಪ ಆಧೀನ ಕಾರ್ಯದರ್ಶಿಗಳು.
11. ಆರ್ಥಿಕ ಇಲಾಖೆಯ ಎಲ್ಲಾ ಶಾಖಾಧಿಕಾರಿಗಳು.
12. ರಾಜ್ಯದ ಎಲ್ಲಾ ಖಜಾನೆ ಅಧಿಕಾರಿಗಳು (ರಾಜ್ಯ ಖಜಾನಾ ಇಲಾಖೆ ನಿರ್ದೇಶಕರ ಮೂಲಕ)
13. ವಾರಪತ್ರ/ಶಾಖೆಯ ರಕ್ಷಾ ಕಡತ.